ಕುಟುಂಬಗಳು ಅನುಸರಿಸುವ ಕ್ರಮವಾಗಿದೆ. ಹೀಗಾಗಿ ನೀವಿಬ್ಬರೂ ನನ್ನ ಕೋಣೆಯೊಳಗೆ ಕಾಲಿರಿಸಿದ ಕೂಡಲೇ ನನಗೆ ವಿಷಯ ಅರ್ಥವಾಗಿಹೋಯಿತು.

ನಿಜ ಹೇಳಬೇಕಾದರೆ ನನಗೆ ಒಮ್ಮೆಲೆ ಇಷ್ಟವಾದವರು ಸುರಯ್ಯ ಆಂಟಿ. ಆಕೆಯ ಬೆಚ್ಚಗಿನ ನಗು, ನಿಷ್ಕಪಟ ಕಣ್ಣುಗಳು ಮತ್ತು ಆತ್ಮೀಯವಾದ ನಡೆ ನುಡಿ ನನಗೆ ಬಹಳ ಇಷ್ಟವಾಯಿತು. ನೀನಂತೂ ಮೊದಲ ನೋಟದಲ್ಲಿಯೇ ನನಗೆ ಹಿಂದಿ ಫಿಲ್ಮ್‌ಗಳ ವಿಲನ್‌ನಂತೆ ಕಂಡುಬಂದೆ. ಸುರಯ್ಯ ಆಂಟಿ ನನ್ನ ಹೆಸರು ಕುಲ ಗೋತ್ರ ವಿಚಾರಿಸಿಕೊಂಡಾಗಲೇ ನನಗೆ ನಾಚಿಕೆಯಿಂದ ಮುಖ ಮುಚ್ಚಿಕೊಳ್ಳಬೇಕೆಂದು ಅನಿಸಿತು. ಏಕೆಂದರೆ, ಹೆಣ್ಣುಮಕ್ಕಳು ತಮ್ಮ ಮದುವೆಯ ಪ್ರಸ್ತಾವನೆ ಅಥವಾ ಮಾತುಕತೆ ಆಗುತ್ತಿದೆ ಎಂದಾಗ ಕಡ್ಡಾಯವಾಗಿ ನಾಚಿಕೊಳ್ಳಲೇಬೇಕು. ಕೆನ್ನೆಯನ್ನು ಕೆಂಪು ಕೆಂಪಾಗಿಸಿಕೊಂಡು ದೃಷ್ಟಿಯನ್ನು ನೆಲಕ್ಕೆ ನೆಟ್ಟು ಇಡೀ ದೇಹವನ್ನು ಮುದುಡಿಕೊಂಡು ತಬ್ಬಿಬ್ಬಾಗಬೇಕು. ಆ ಸಂದರ್ಭದಲ್ಲಿ ನಾನು ನಾಚಿಕೆಯನ್ನು ಅಭಿನಯಿಸಲಿಲ್ಲ. ಅದು ತಂತಾನೇ ನನ್ನ ಮೇಲೆ ಆವರಿಸಿಬಿಟ್ಟಿತು.

ಸುರಯ್ಯ ಆಂಟಿಯಂತೂ, ''ಎಷ್ಟು ಚಂದ ಕಾಣ್ತೆಯ ಮಗಳೇ ನೀನು ನವೀದಾಳ ಮಗಳಲ್ಲವೇ?'' ಎಂದು ಖುಷಿಖುಷಿಯಿಂದ ಹೇಳುತ್ತಾ ನನ್ನ ಹಣೆಯ ಮೇಲೆ ಹಗುರವಾದ ಮುತ್ತೊಂದನ್ನು ಇತ್ತು, ''ಪರೀಕ್ಷೆ ಇದೆಯಾ? ಓದ್ಕೋ ಓದ್ಕೋ! ನಾನು ಡಿಸ್ಟರ್ಬ್ ಮಾಡೋದಿಲ್ಲ'' ಎಂದು ಮಗನನ್ನು ಅಂದರೆ ನಿನ್ನನ್ನು ಜೊತೆಯಲ್ಲೇ ಎಳೆದುಕೊಂಡು ಹೊರಹೋದರು.

ನಾನು ಕೂಡಲೇ ಎದ್ದು ಬಾಗಿಲಿನ ಬೋಲ್ಟನ್ನು ಹಚ್ಚಿದೆ ಮತ್ತು ನನಗೆ ಮೈಯೆಲ್ಲಾ ಬಿಸಿಯೇರಿ ತಡವರಿಸಿದಂತಾಯಿತು. ನಾನು ಫ್ಯಾನ್ ಹಚ್ಚಿದೆ. ಕೆಳಗಡೆ ಏನು ನಡೆಯುತ್ತಿದೆ ಎನ್ನುವುದು ನನಗೆ ಕುಳಿತಲ್ಲಿಯೇ ಗೊತ್ತಾಗುತ್ತಿತ್ತು. ಸುರಯ್ಯ ಆಂಟಿ ನನ್ನ ಅಮ್ಮಿಯನ್ನು ಹುಡುಕಿ ಹೆಕ್ಕಿ ತೆಗೆದು ನನ್ನ ಬಗ್ಗೆ ವಿಚಾರಿಸುತ್ತಲೇ ತಮ್ಮ ಇಂಗಿತವನ್ನು ಸೂಕ್ಷ್ಮವಾಗಿ ವ್ಯಕ್ತಪಡಿಸಿ ನನ್ನ ಅಮ್ಮಿಯ ಪ್ರತಿಕ್ರಿಯೆಯನ್ನು ಅವಲೋಕಿಸಿ ಮತ್ತೆ ನನ್ನ ಚಿಕ್ಕಮ್ಮ ರಾಹತ್‌ನನ್ನು ಕಂಡು ಆಕೆಯ ಮೂಲಕ ಕೂಡ ನನ್ನ ಅಮ್ಮಿಯ ಜೊತೆ ಮಾತುಕತೆ ಮುಂದುವರಿಸಿರುತ್ತಾರೆ ಎಂಬುದು ನನಗೆ ತಿಳಿದ ವಿಷಯವಾಗಿತ್ತು.

ಕುಟುಂಬದ ವಲಯದಲ್ಲಿಯೇ ಈಗಾಗಲೇ ಮೂರ್ನಾಲ್ಕು ತಾಯಂದಿರಿಂದ ಈ ರೀತಿಯ ಪ್ರಯತ್ನ ನಡೆದಿತ್ತು. ನನ್ನ ಅಮ್ಮಿ ಅವರೆಲ್ಲರ ಪ್ರಸ್ತಾವನೆಗಳನ್ನು ತಳ್ಳಿ ಹಾಕಿದ್ದಳು. ಒಬ್ಬ ಹುಡುಗನದು ಫರ್ನಿಚರ್ ಬಿಸಿನೆಸ್ ಅಂತೆ... ಸಖತ್ ಶ್ರೀಮಂತ ಕೂಡಾ. ಇನ್ನೊಬ್ಬ ಸೌದಿಯಲ್ಲಿ ಕೆಲಸಕ್ಕೆ ಇದ್ದಾನೆ; ಮತ್ತೊಬ್ಬನದು ಸೈಕಲ್ ಮಾರಾಟದ ಹೋಲ್‌ಸೇಲ್ ಅಂಗಡಿ. ಇನ್ನೊಬ್ಬನದು ಅದೆಂತದೋ... ನನ್ನ ಅಮ್ಮಿಯದು ಒಂದೇ ಉತ್ತರ.

'ಇನ್ನೂ ಚಿಕ್ಕವಳು; ಓದುತ್ತಿದ್ದಾಳೆ. ಈಗಲೇ ನಾವು ಮದುವೆಯ ಮಾತುಕತೆಯನ್ನು ನಡೆಸುವುದಿಲ್ಲ.' ಒಂದಿಬ್ಬರು ತಮ್ಮ ಕೋಪವನ್ನು ಒಳಗೊಳಗೆ ನಿಯಂತ್ರಿಸುತ್ತಾ, 'ನಾವೇನು ನಾಳೇನೇ ಮದುವೆ ಮಾಡಿಕೊಡಿ ಅಂತ ಕೇಳ್ತಿದೀವಾ? ಮಾತುಕತೆ ನಡೆಸಿ ಮಂಗನಿಯ (ನಿಶ್ಚಿತಾರ್ಥದ) ಒಂದು ಶಾಸ್ತ್ರವನ್ನು ಮಾಡಿ ಬಿಟ್ಟರೆ ಮುಂದೆ ಎರಡು ಮೂರು ವರ್ಷ ಬಿಟ್ಟು ಮದುವೆ ಮಾಡಬಹುದು' ಎಂದು ಕೆಳದನಿಯಲಿ ತಮ್ಮ ಮಾತನ್ನು ಮುಂದುವರೆಸಿ, ನನ್ನ ಅಮ್ಮಿ ಅದೆಲ್ಲಾ ನಡೆಯುವುದಿಲ್ಲ ಎಂದು ತಲೆಯಾಡಿಸಿದ ನಂತರ ನಿರಾಸೆಗೊಂಡರು. ಆದರೂ ಒಂದಿಷ್ಟು ನಿರೀಕ್ಷೆಯನ್ನು ಬಾಕಿ ಉಳಿಸಿಕೊಂಡು ನನ್ನಮೇಲೆ ಒಂದು ಕಣ್ಣೋಟವನ್ನು ಇಟ್ಟು ತಮ್ಮ ಅದೃಷ್ಟ ಪರೀಕ್ಷೆಗಾಗಿ ಕಾಯುತ್ತಿದ್ದರು.

ಈ ನಡುವೆ ಸುರಯ್ಯ ಆಂಟಿ ಏಕ್ದಮ್ ನನ್ನನ್ನು ಹೈಜಾಕ್ ಮಾಡುವ ಕಾರ್ಯಕ್ರಮಕ್ಕೆ ನಾಂದಿ ಹಾಡಿದ್ದೂ ಅಲ್ಲದೆ ತಾವೇ ನೇರವಾಗಿ ಮತ್ತು ರಾಹತ್ ಆಂಟಿಯನ್ನು ಕೂಡ ಸೇರಿಸಿಕೊಂಡು ಅಮ್ಮಿಯ ಮೇಲೆ ಅಪಾರ ಪ್ರಭಾವವನ್ನು ಬೀರುತ್ತಾ ಕೊನೆಗೂ ಜಯಶಾಲಿಯಾಗಿ ಬಿಟ್ಟರು. ನನ್ನ